ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಗುರುವಾರ ೧ನೇ ಸೆಪ್ಟೆಂಬರ್ ೧೯೯೪, ಭಾದ್ರಪದ, ಶಕ ೧೯೧೬,

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ

ಬೆಳಗ್ಗೆ ೧೧-೨೦ ಗಂಟೆಗೆ ಸಮಾವೇಶಗೊಂಡಿತು

ಅಧ್ಯಕ್ಷರು : (ಶ್ರೀ ವಿ. ಎಸ್. ಕೌಜಲಗಿ) ಅವರು ಪೀಠವನ್ನು ಅಲಂಕರಿಸಿದ್ದರು.

ಶ್ರೀ ಡಿ.ಬಿ. ಚಂದ್ರೇಗೌಡ (ತೀರ್ಥಹಳ್ಳಿ) : ಮಾನ್ಯ ಅಧ್ಯಕ್ಷರೇ, ನಿನ್ನೆ ಸದನದಲ್ಲಿ ನಡೆದಂಥ ಪರಿಸ್ಥಿತಿಯನ್ನು ತಮ್ಮ ಗಮನಕ್ಕೆ ತಂದಿದ್ದೇವೆ, ಒಂದು ನಿರ್ಧಾರಕ್ಕೂ ಕೂಡ ಬಂದಿದ್ದೇನೆ. ತಮ್ಮ ನಿರ್ಧಾರ ಏನು ಎಂದು ತಾವೇ ಮೊದಲು ಹೇಳಿದರೆ ಉಳಿದ ಈ ವಿಚಾರಕ್ಕೆ ನಾವು ಬರುತ್ತೇವೆ.

ಶ್ರೀ ಆರ್.ವಿ. ದೇಶಪಾಂಡೆ (ವಿರೋಧಪಕ್ಷದ ನಾಯಕರು) : ನಿನ್ನೆ ನಾವು ಮೀಸಲಾತಿ ವಿಚಾರದಲ್ಲಿ ಸುಪ್ರಿಂಕೋರ್ಟ್ ಪ್ರಕಾರ ಏನು 86 ಆರ್ಡರ್ಸ್ ಸ್ಟೇ ಆಗಿದೆ, ಹಾಗಾಗಿ ಈಗ ಪರಿಸ್ಥಿತಿ ಏನಾಗಿದೆ ಎಂದರೆ ಪ್ರೊಫೆಷನ್ ಕಾಲೇಜುಗಳಲ್ಲಿ ಅಡ್ಮಿಷನ್ ಆಗುತ್ತಿಲ್ಲ. ರಿಕ್ರೂಟ್‌ಮೆಂಟ್ ಆಗುತ್ತಿಲ್ಲ. ಇಡೀ ನಮ್ಮ ಯುವಕರ ಭವಿಷ್ಯ ಇವತ್ತು ಸ್ಪೇಕ್‌ನಲ್ಲಿದೆ. ನಾವು ನಿನ್ನೆ ಪ್ರಶ್ನೋತ್ತರ ಕಾಲವನ್ನು ಮುಂದೂಡಿ ಈ ಒಂದು ವಿಚಾರವನ್ನು ಪ್ರಸ್ತಾಪ ಮಾಡಲಿಕ್ಕೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಂಡಿದ್ದೆವು. ನಾವು ತಮ್ಮ ಮೇಲೆ ಏನೂ ದೋಷರೋಪಣೆ ಮಾಡುತ್ತಿಲ್ಲ. ಆದರೆ ಸರ್ಕಾರ ಆ ಸಮಯದಲ್ಲಿ ತಕ್ಷಣ ಸ್ಪಂಧಿಸಿದ್ದರೆ ನಿನ್ನೆ ನಾವು ಪ್ರೊಸಿಡಿಂಗ್ಸ್‌ನ್ನು ಬಾಯ್‌ಕಾಟ್ ಮಾಡುವ ಪ್ರಶ್ನೆ ಬರುತ್ತಾ ಇರಲಿಲ್ಲ. ಆದರೆ ಇವತ್ತು ಪುನಃ ನಮ್ಮನ್ನು ತಮ್ಮ ಕಛೇರಿಗೆ ಕರೆದು ಈ ಕಾರ್ಯಕಲಾಪಗಳು ಸರಿಯಾಗಿ ನಡೆಯಬೇಕು, ಈ ವಿಷಯಗಳು ಸರಿಯಾಗಿ ಚರ್ಚೆಯಾಗಬೇಕು ಎಂದು ತಾವೂ ಸಹ ತಮ್ಮ ಮಧ್ಯಸ್ಥಿಕೆ ಮಾಡಿದ್ದರಿಂದ ಒಂದು ತೀರ್ಮಾನಕ್ಕೆ ನಾವು ಬಂದಿದ್ದೇವೆ. ಕೊಶ್ಚನ್ ಹವರ್ ಬಹಳ ಮಹತ್ವದ್ದು. ಆದ್ದರಿಂದ ನಾವು ಯಾವತ್ತೂ ಪ್ರಶ್ನೋತ್ತರ ಕಾಲವನ್ನು ಮುಂದೂಡಬೇಕು ಎಂದು ಹೇಳಿಲ್ಲ ಆದರೆ ಇವತ್ತು ಈ ಮೀಸಲಾತಿ ವಿಚಾರದಲ್ಲಿ ಏನು ಗಂಭೀರವಾದ ಪರಿಣಾಮವಾಗಿದೆ, ಅದರಿಂದ ಮತ್ತೊಮ್ಮೆ ತಮ್ಮನ್ನು ವಿನಂತಿ ಮಾಡುತ್ತಿದ್ದೇನೆ ತಾವು ಇವತ್ತು ಸ್ಪೆಷಲ್ ಕನ್ಸಿಡರೇಷನ್ ಮಾಡಿ ಈ ಪ್ರಶ್ನೋತ್ತರ ಕಾಲವನ್ನು ಮುಂದೂಡಿ ಈ ಮೀಸಲಾತಿ ವಿಚಾರವನ್ನು ಚರ್ಚೆ ಮಾಡಲಿಕ್ಕೆ ಅವಕಾಶ ಮಾಡಿಕೊಡಬೇಕು. ಇದಾದನಂತರ ತಾವು ಪ್ರಶ್ನೋತ್ತರವನ್ನು ತೆಗೆದುಕೊಂಡರೆ ಸದಸ್ಯರಿಗೆ ಏನೂ ತೊಂದರೆಯಾಗುವುದಿಲ್ಲ. ಇದನ್ನು ತಾವು ಒಪ್ಪಿಕೊಳ್ಳಬೇಕೆಂದು ತಮ್ಮಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು : ವಿರೋಧ ಪಕ್ಷದ ನಾಯಕರು ಮತ್ತು ಸದಸ್ಯರು ಏನು ಗಂಭೀರವಾದ ವಿಷಯವನ್ನು ಇಟ್ಟಿದ್ದಾರೆ ಅದಕ್ಕೆ ಪ್ರಶ್ನೋತ್ತರವನ್ನು ಕೆಲವು ಕಾಲ ಮುಂದೂಡಿ ಆ ಗಂಭೀರವಾದ ವಿಷಯವನ್ನು ಚರ್ಚೆ ಮಾಡಲಿಕ್ಕೆ ಸದನ ಒಪ್ಪಿದೆ ಎಂದು ನಾನು ತಿಳಿದುಕೊಂಡಿದ್ದೇನೆ.

ಅಧ್ಯಕ್ಷರ ಅಪ್ಪಣೆಯ ಮೇರೆಗೆ ಪ್ರಸ್ತಾಪಿಸಲಾದ ವಿಷಯ

ರಾಜ್ಯದಲ್ಲಿ ಮೀಸಲಾತಿಯ ಅನುಷ್ಠಾನದಿಂದ ಉಂಟಾದ ಪರಿಸ್ಥಿತಿ

+ ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೇ, ಮೊದಲನೆಯದಾಗಿ ಎಲ್ಲಾ ವಿರೋಧ ಪಕ್ಷದ ಪರವಾಗಿ ತಮಗೆ ಈ ಪ್ರಶ್ನೋತ್ತರ ಕಾಲವನ್ನು ಸಸ್ಪೆಂಡ್